

# ಆಹಾ! ಆಫ್ರಿಕಾ...

ದಕ್ಷಿಣ ಆಫ್ರಿಕಾದ ಪ್ರವಾಸ ಎಂದರೆ ಪ್ರವಾಸಿಗ ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ನಡೆಸುವ ಒಂದು ಕುತೂಹಲಕರ ಪ್ರಯತ್ನವೂ ಹೌದು. ಈ ಪ್ರವಾಸ ಕಥನ ಆಫ್ರಿಕಾದ ಕಾಡುಗಳಲ್ಲಿನ ಜೀವಜಾಲದ ವೈವಿಧ್ಯ–ಸಮೃದ್ಧಿಯ ಜೊತೆಗೆ ನಾಡಿನ ಚಿತ್ರಗಳನ್ನೂ ದಾಖಲಿಸುತ್ತದೆ. ಕಾಡಿನೊಂದಿಗೆ ಸಂವಾದ ನಡೆಸುವ ಪ್ರವಾಸಿಗನ ಕುತೂಹಲದ ಕಣ್ಣುಗಳು ಕಥನದುದ್ದಕ್ಕೂ ಜಾಗೃತವಾಗಿವೆ.

■ ಶ್ಯಾಮಲಾ ಗುರುಪ್ರಸಾದ್

**ಜೋ**ಹಾನ್ಸೆಸ್‌ಬರ್ಗ್ ನಗರದಲ್ಲಿ ಕಾಲಿರಿಸಿದಾಗ ಆಗಸ್ಟ್ ಆರಂಭದ ಚಳಿಯ ಕೊರೆತ ನಮ್ಮನ್ನು ಬರಮಾಡಿಕೊಂಡಿತು. ನಮ್ಮ ಬಳಿಯಿದ್ದ ತೆಳ್ಳಗಿನ ಸ್ವೆಟರ್‌ಗಳು ಆಫ್ರಿಕಾ ಪ್ರವಾಸ ಮುಗಿಸುವಷ್ಟರಲ್ಲಿ ನಮ್ಮನ್ನು ಕಂಗಾಲು ಮಾಡಿಬಿಟ್ಟಿರುತ್ತವೆ ಎಂಬುದು ನನ್ನ ಬುದ್ಧಿಗೆ ತೋಚದೆ ಹೋದುದಕ್ಕೆ ಪೇಚಾಡಿದೆ. ಊಹೆಗೂ ಮೀರಿದ ತಣ್ಣನೆಯ ಗಾಳಿಯಿಂದ ಕೈಕಾಲುಗಳು ಥರಗುಟ್ಟಿದವು.

ನನ್ನ ಗಂಡ ಗುರುಪ್ರಸಾದ್ ಹಾಗೂ ನಾನು ದಕ್ಷಿಣ ಆಫ್ರಿಕಾ ಪ್ರವಾಸ ಮಾಡಲು ಆಸೆಪಟ್ಟಾಗ ಇಬ್ಬರ ಮನದಲ್ಲೂ ಅಳುಕು ಆತಂಕಗಳಿದ್ದವು. ಈ ದೇಶದ ಜನರು ಕಳ್ಳತನ, ಹಗಲುದರೋಡೆಯಲ್ಲಿ ನಿಸ್ಸೀಮರು ಎಂದು ಸ್ನೇಹಿತರು ಎಚ್ಚರಿಕೆ ಹೇಳಿದ್ದರು. ಯಾರ ಹಿತನುಡಿಗೂ ಕಿವಿಗೊಡದೆ, ನಾವು ಇದುವರೆಗೂ ಕಂಡಿರದ ಹೊಸನಾಡನ್ನು ನೋಡಿ ಬರುವುದೆಂದು ನಿರ್ಧರಿಸಿದೆವು.

ಜೋಹಾನ್ಸೆಸ್‌ಬರ್ಗ್‌ನಿಂದ 20 ಕಿ.ಮೀ. ದೂರದಲ್ಲಿ ಸೊವೆಟೊ ಎಂಬ ಸ್ಥಳವಿದೆ. ಯಾವ ಕಾರಣಗಳಿಗಾಗಿ ಪ್ರವಾಸಿಗರು